ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1354

ಸದಸ್ಯರ ಹೆಸರು : ಶ್ರೀ ಬಿ.ಎಂ.ಎಲ್. ಕಾಂತ್ ರಾಜ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸುವ ದಿನಾಂಕ : 24.12.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ತೋಟಗಾರಿಕೆ ಇಲಾಖೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಧ್ಯೇಯೋದ್ದೇಶಗಳೇನು; ಇದರ ವ್ಯಾಪ್ತಿಯಲ್ಲಿ ಬರುವ ನಿಗಮ, ಮಂಡಳಿ, ಇತರೆ ಅಂಗ ಸಂಸ್ಥೆಗಳಾವುವು; (ವಿವರವಾದ ಮಾಹಿತಿ ನೀಡುವುದು)	ತೋಟಗಾರಿಕೆ ಇಲಾಖೆಯು 1965 ರಿಂದ ಸ್ವತಂತ್ರ ಇಲಾಖೆಯಾಗಿ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿದೆ. **ಇಲಾಖೆಯ ಧ್ಯೇಯೋದ್ದೇಶಗಳು ಈ ಕೆಳಕಂಡಂತಿವೆ;** • ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸುವುದು. • ತೋಟಗಾರಿಕೆ ಸಂಶೋಧನೆಗೆ ಪ್ರೋತ್ಸಾಹ, ಆಧುನಿಕ ತಂತ್ರಜ್ಞಾನಗಳನ್ನು ವಿಸ್ತರಿಸುವುದರೊಂದಿಗೆ ನಿರ್ದಿಷ್ಟ ಪ್ರದೇಶಗಳಿಗೆ ಯೋಜನೆಗಳನ್ನು ರೂಪಿಸಿ ಕಾರ್ಯಗತ/ ಅನುಷ್ಠಾನಗೊಳಿಸುವುದು. • ಕೊಯ್ಲೋತ್ತರ ನಂತರದ ನಿರ್ವಹಣೆ ಮತ್ತು ಮಾರುಕಟ್ಟೆ ಸಂಪರ್ಕ ಸುಧಾರಣೆ. • ಸಂಸ್ಕರಣೆ ಹಾಗೂ ರಫ್ತಿನ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸುವುದು. • ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಪರಿಸರ ಸುಧಾರಣೆ ಪ್ರೋತ್ಸಾಹಿಸುವುದು. • ಉತ್ಪನ್ನಗಳ ಪ್ರಮಾಣೀಕರಣಕ್ಕೆ ನೆರವಾಗುವುದು. • ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕೈಗೊಳ್ಳುವುದು. • ರೈತರಿಗೆ ಅಗತ್ಯವಿರುವ ಸಸಿ/ ಕಸಿ ಗಿಡಗಳನ್ನು ತಯಾರಿಸಿ ವಿತರಿಸಲಾಗುವುದು.

		• ಇಲಾಖೆಯ ವ್ಯಾಪ್ತಿಯಡಿ ಬರುವ ನಿಗಮ ಮಂಡಳಿಗಳ ವಿವರ ಈ ಕೆಳಕಂಡಂತಿದೆ: • ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ, ಬೆಂಗಳೂರು. • ಕರ್ನಾಟಕ ರಾಜ್ಯ ಸಾಂಬಾರು ಅಭಿವೃದ್ಧಿ ಮಂಡಳಿ, ಹುಬ್ಬಳ್ಳಿ. • ಕರ್ನಾಟಕ ದ್ರಾಕ್ಷಾ ರಸ ಮಂಡಳಿ, ಬೆಂಗಳೂರು. • ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ (ನಿ), ಬೆಂಗಳೂರು. • ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ, ವಿಜಯಪುರ. • ತೋಟಗಾರಿಕೆ ಇಲಾಖೆಯ ಇತರೆ ಅಂಗ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ: • ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜೆನ್ಸಿ (ರಿ), ಬೆಂಗಳೂರು. • ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ, ಬೆಂಗಳೂರು. • ಕರ್ನಾಟಕ ರಾಜ್ಯ ತೋಟಗಾರಿಕೆ ಉತ್ಕೃಷ್ಟ ಏಜೆನ್ಸಿ • ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನ
ಆ)	ಕಳೆದ 5 ವರ್ಷಗಳಿಂದ ತೋಟಗಾರಿಕೆ ಇಲಾಖೆ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ನಿಗಮ, ಮಂಡಳಿ, ಇತರೆ ಅಂಗ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಹಾಗೂ ಇತರೆ ಕಡೆಗಳಿಂದ ಎಷ್ಟು ಹಣ ಬಂದಿದೆ; ಖರ್ಚಾಗಿರುವ ಹಣವೆಷ್ಟು; ಉಳಿದಿರುವ ಹಣವೆಷ್ಟು; (ವರ್ಷಾವಾರು ವಿವರವಾದ ಮಾಹಿತಿ ನೀಡುವುದು)	ಕಳೆದ 5 ವರ್ಷಗಳಿಂದ, ತೋಟಗಾರಿಕೆ ಇಲಾಖೆ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ನಿಗಮ ಮಂಡಳಿಗಳಿಗೆ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಇತರೆ ಕಡೆಗಳಿಂದ ಬಂದಿರುವ ಅನುದಾನದ ವಿವರ, ವೆಚ್ಚ ಹಾಗೂ ಉಳಿದಿರುವ ಅನುದಾನ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ)	ಕಳೆದ 5 ವರ್ಷಗಳಲ್ಲಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಜಾರಿಗೊಳಿಸಲಾಗುತ್ತಿರುವ ಯೋಜನೆಗಳಾವುವು; ಈ ಯೋಜನೆಗಳ ಅಡಿ ಯಾವ ಯಾವ ಸಂಘ ಸಂಸ್ಥೆಗಳನ್ನು ನೋಂದಣಿ ಮಾಡಿಕೊಳ್ಳಲಾಗಿದೆ; ಮತ್ತು ಇವುಗಳ ಮೂಲಕ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು)	ಕಳೆದ 5 ವರ್ಷಗಳಲ್ಲಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ. 2018-19 ನೇ ಸಾಲಿನಲ್ಲಿ ಆದೇಶ ಸಂಖ್ಯೆ: DRB2/SOR/289/ 2018-19 ರಲ್ಲಿ ಆರು ತೋಟಗಾರಿಕೆ ಉತ್ಕೃಷ್ಟ ಕೇಂದ್ರಗಳನ್ನೊಳಗೊಂಡಂತೆ (ದಾಳಿಂಬೆ ಉತ್ಕೃಷ್ಟ ಕೇಂದ್ರ ಬಾಗಲಕೋಟೆ, ತರಕಾರಿ ಉತ್ಕೃಷ್ಟ ಕೇಂದ್ರ ಧಾರವಾಡ, ಮಾವು ಉತ್ಕೃಷ್ಟ ಕೇಂದ್ರ ಕೋಲಾರ, ನಿಖರ ಬೇಸಾಯ ಮತ್ತು ತರಬೇತಿ ಉತ್ಕೃಷ್ಟ ಕೇಂದ್ರ ಮಂಡ್ಯ, ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ ಹಾಸನ, ಪುಷ್ಪಗಾರಿಕೆ ಉತ್ಕೃಷ್ಟ ಕೇಂದ್ರ ಶಿವಮೊಗ್ಗ) ಕರ್ನಾಟಕ ಸಂಘಗಳ ನೊಂದಣಿ ಕಾಯಿದೆ 1960 (1960ನೆಯ ಇಸವಿ 17 ಕ್ರಮಾಂಕದ ಕರ್ನಾಟಕ ಅಧಿನಿಯಮ) ಮೇರೆಗೆ AGENCY FOR STATE HORTICULTURE CENTERS OF EXCELLENCE ಅನ್ನು ನೋಂದಾಯಿಸಲಾಗಿದೆ. ಸದರಿ ಸಂಘಕ್ಕೆ ಯಾವುದೇ ಅನುದಾನ ಬಿಡುಗಡೆಯಾಗದ ಕಾರಣ ಯಾವುದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ.
ಈ)	ರೈತ ಉತ್ಪಾದಕ ಸಂಘ (FPO) ಎಂದರೇನು; ಸದರಿ ಇಲಾಖೆಯಡಿ ಎಷ್ಟು ಉತ್ಪಾದಕ ಸಂಘಗಳನ್ನು ನೋಂದಣಿ ಮಾಡಲಾಗಿದೆ ಕಳೆದ ಮೂರು ವರ್ಷಗಳಲ್ಲಿ ಈ ಸಂಘಗಳಿಗೆ ನೀಡಿರುವ ಅನುದಾನವೆಷ್ಟು; (ವಿವರವಾದ ಮಾಹಿತಿ ನೀಡುವುದು)	ರೈತರಿಗೆ ಅಗತ್ಯವಿರುವ ವಿವಿಧ ಸಹಾಯ, ಸೌಲಭ್ಯ ಹಾಗೂ ಸಹಕಾರಗಳನ್ನು ಒದಗಿಸಲು ಪ್ರಾಥಮಿಕ ರೈತ ಉತ್ಪಾದಕರನ್ನು ಸಂಘಟಿಸಿ 300 ರಿಂದ 1000 ಸದಸ್ಯರನ್ನು ಒಳಗೊಂಡಂತೆ ರಚಿಸಲಾಗುವ ಸಂಸ್ಥೆಗೆ ರೈತ ಉತ್ಪಾದಕರ ಸಂಸ್ಥೆ(FPO) ಎನ್ನಲಾಗುತ್ತದೆ. **ನೊಂದಣಿ ಮಾಡಲು ಇರುವ ಮಾನದಂಡಗಳು:** 1. ಆಯ್ಕೆ ಮಾಡಲಾದ ಪ್ರದೇಶವು ಗರಿಷ್ಟ 10 ರಿಂದ 12 ಗ್ರಾಮಗಳಿಂದ ಸದಸ್ಯರಾಗಲು ಇಚ್ಛೆವುಳ್ಳ ಕನಿಷ್ಟ 300 ರೈತರನ್ನು ಪ್ರಾರಂಭದಲ್ಲಿಯೇ ಹೊಂದಿರಬೇಕು.

2. ಸದಸ್ಯ ರೈತರು ರೂ.1,000/- ಷೇರುಧನ ಪಾವತಿಸಬೇಕು.

3. ಆಯ್ಕೆ ಮಾಡಲಾದ ಪ್ರದೇಶ FPO ವ್ಯವಹಾರ ನಡೆಸಲು ಸೂಕ್ತವಾಗಿರಬೇಕು ಹಾಗೂ ತೋಟಗಾರಿಕೆ ಬೆಳೆಗಳನ್ನು ಹೊಂದಿರಬೇಕು.

4. ರಾಜ್ಯ / ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ FPO ಗಳನ್ನು ರಚಿಸಿ FPO ಮುನ್ನಡೆಸಲು ನಿರ್ದೇಶಕ ಮಂಡಳಿಯು ಬದ್ಧರಾಗಿರಬೇಕು.

5. ಕಂಪನಿಯ ಕಾಯ್ದೆ 2013 ರನ್ವಯ ವಿಧಿಸಲಾಗುವ ಎಲ್ಲಾ ನಿಯಮಗಳನ್ನು ಪಾಲಿಸಬೇಕು.

ತೋಟಗಾರಿಕೆ ಇಲಾಖೆಯಡಿ ಪ್ರಸ್ತುತ ಒಟ್ಟು 113 FPOಗಳನ್ನು ನೊಂದಣಿ ಮಾಡಲಾಗಿದೆ.

ಕಳೆದ 3 ವರ್ಷಗಳಲ್ಲಿ ಈ ಸಂಘಗಳಿಗೆ ಒಟ್ಟು ರೂ.598.47 ಲಕ್ಷಗಳಷ್ಟು ಅನುದಾನ ನೀಡಲಾಗಿದೆ, ವಿವರ ಕೆಳಕಂಡಂತಿದೆ.

ವರ್ಷ	ಅನುದಾನ
2018-19	411.30
2019-20	157.174
2020-21	0.000
2021-22	30.000
ಒಟ್ಟು	**598.474**

<table>
<tr>
<td>ಉ)</td>
<td>ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟು ರೈತ ಉತ್ಪಾದಕ ಸಂಘಗಳಿವೆ; ಅವು ಯಾವುವು; ಯಾವಾಗ ನೋಂದಣಿ ಮಾಡಲಾಗಿದೆ; ನೋಂದಣಿ ಮಾಡಲು ಇರುವ ಮಾನದಂಡಗಳೇನು; ಈಗಾಗಲೇ ಎಷ್ಟು ಅನುದಾನವನ್ನು ಈ ಸಂಘಗಳಿಗೆ ನೀಡಲಾಗಿದೆ? (ವಿವರವಾದ ತಾಲ್ಲೂಕುವಾರು ಮಾಹಿತಿ ನೀಡುವುದು?</td>
<td>ತೋಟಗಾರಿಕೆ ಇಲಾಖೆಯ ವತಿಯಿಂದ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 5 ರೈತ ಉತ್ಪಾದಕರ ಸಂಸ್ಥೆಗಳನ್ನು ಕಂಪನಿ ಕಾಯ್ದೆ 2013ರ ಮಾನದಂಡನೆ ಗಳನ್ವಯ ನೊಂದಾಯಿಸಲಾಗಿದೆ. ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>FPO ಹೆಸರು</th><th>ನೊಂದಣಿ ದಿನಾಂಕ</th><th>ಅನುದಾನ (ರೂ. ಲಕ್ಷಗಳಲ್ಲಿ)</th></tr>
<tr><td>1</td><td>ಪಾವಗಡ</td><td>ಪಾವಗಡ HFPCL</td><td>14-03-2016</td><td>40.59</td></tr>
<tr><td>2</td><td>ಗುಬ್ಬಿ</td><td>ಹೇಮಾವತಿ HFPCL</td><td>24-05-2016</td><td>40.56</td></tr>
<tr><td>3</td><td>ಶಿರಾ</td><td>ಗಡಿನಾಡು HFPCL</td><td>10-06-2016</td><td>36.94</td></tr>
<tr><td>4</td><td>ತುಮಕೂರು</td><td>ಹೆಬ್ಬೂರು HFPCL</td><td>13-10-2017</td><td>40.58</td></tr>
<tr><td>5</td><td>ಚಿಕ್ಕನಾಯಕನ ಹಳ್ಳಿ</td><td>ಗೋಡೆಕೆರೆ HFPCL</td><td>17-07-2017</td><td>37.31</td></tr>
</table>
* HFPCL: ತೋಟಗಾರಿಕೆ ರೈತ ಉತ್ಪಾದಕರ ಕಂಪನಿ ಲಿಮಿಟೆಡ್.</td>
</tr>
</table>

HORTI 580 HGM 2021

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

LCQ 1354

ಅನುಬಂಧ – 1

ಕಳೆದ 5 ವರ್ಷಗಳಿಂದ, ತೋಟಗಾರಿಕೆ ಇಲಾಖೆ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ನಿಗಮ ಮಂಡಳಿಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಇತರೆ ಕಡೆಗಳಿಂದ ಬಂದಿರುವ ಅನುದಾನದ ವಿವರ, ವೆಚ್ಚ ಹಾಗೂ ಉಳಿದಿರುವ ಅನುದಾನದ ವಿವ

ಕ್ರಸಂ	ನಿಗಮ/ಮಂಡಳಿ	ವರ್ಷ	ಒದಗಿಸಲಾದ ಅನುದಾನ			ಒಟ್ಟು ಒದಗಿಸಲಾದ ಅನುದಾನ (ರೂ.ಲಕ್ಷ)	ಅನುದಾನದಲ್ಲಿ ಭರಿಸಲಾದ ವೆಚ್ಚ			ಒಟ್ಟು ಭರಿಸಲಾದ ವೆಚ್ಚ (ರೂ.ಲಕ್ಷ)	ಒಟ್ಟು ಉಳಿಕೆ (ರೂ.ಲಕ್ಷ)		
			ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	ಇತರೆ		ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	ಇತರೆ		ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	ಇತರೆ
1	ತೋಟಗಾರಿಕೆ ಇಲಾಖೆ	2016-17	9608.51	65990.93	-	75499.44	9603.44	64508.23	-	74101.87	5.07	1392.70	-
		2017-18	19418.21	82957.17	-	102375.38	19181.30	82074.36	-	101256.68	236.91	682.81	-
		2018-19	25481.00	114890.30	-	140351.30	24351.00	112256.74	-	136606.74	1110.00	2634.56	-
		2019-20	24329.19	92880.51	-	117209.70	23429.86	89277.56	-	112707.41	899.33	3602.96	-
		2020-21	34601.25	81529.67	-	118430.92	34097.14	80036.45	-	114133.59	404.11	1493.22	-
		2021-22*	18671.38	54351.87	-	71023.25	2210.27	32449.73	-	34650.00	14461.11	21902.14	-
	ಒಟ್ಟು -I		129859.54	492600.45	-	622489.39	112773.01	460692.06	-	573466.07	17118.53	31908.39	-
2	ಕರ್ನಾಟಕ ಸಹಕಾರಿ ತೋಟಗಾರಿಕೆ ಮಾರಾಟ ಮಹಾ ಮಂಡಳ (ನಿ)	2016-17	-	30.00	-	30.00	-	30.00	-	30.00	-	-	-
		2017-18	-	30.00	-	30.00	-	30.00	-	30.00	-	-	-
		2018-19	-	200.00	-	200.00	-	200.00	-	200.00	-	-	-
		2019-20	-	200.00	-	200.00	-	185.38	-	200.00	-	0.00	-
		2020-21	-	200.00	-	200.00	-	153.05	-	153.05	-	46.95	-
		2021-22*	-	25.00	-	25.00	-	25.00	-	25.00	-	0.00	-
	ಒಟ್ಟು		-	685.00	-	685.00	-	623.43	-	638.05	-	46.95	-
3	ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಬೆಂಗಳೂರು	2016-17	-	200.00	-	200.00	-	111.57	-	111.57	-	88.43	-
		2017-18	-	300.00	-	300.00	-	155.48	-	155.46	-	144.52	-
		2018-19	-	200.00	-	200.00	-	124.96	-	124.96	-	75.04	-
		2019-20	-	200.00	-	200.00	-	107.45	-	107.45	-	92.55	-
		2020-21	-	160.00	-	160.00	-	157.01	-	157.01	-	2.99	-
		2021-22*	-	20.00	-	20.00	-	4.00	-	4.00	-	16	-
	ಒಟ್ಟು		-	1080.00	-	1080.00	-	660.47	-	660.47	-	419.53	-
4	ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ, ಇಂಡಿ ಜಿ: ವಿಜಯಪುರ	2017-18	-	100.00	-	100.00	-	0.00	-	0.00	-	100.00	ಮಂಡಳಿಯು 2017 ರಲ್ಲಿ ಸ್ಥಾಪನೆಯಾಗಿರುತ್ತದೆ.
		2018-19	-	100.00	-	100.00	-	0.98	-	0.98	-	99.01	
		2019-20	-	100.00	-	100.00	-	2.84	-	2.84	-	97.16	
		2020-21	-	130.00	-	130.00	-	121.86	-	121.86	-	8.15	

		2021-22*	-	10.00	-	10.00	-	10.00	-	10.00	-	0.00	
	ಒಟ್ಟು		-	440.00	-	440.00	-	135.68	-	135.68	-	304.32	-
5	ಕರ್ನಾಟಕ ರಾಜ್ಯ ದ್ರಾಕ್ಷಾರಸ ಮಂಡಳಿ, ಬೆಂಗಳೂರು	2016-17	–	200.00	–	200.00	-	200.00	-	200.00	–	0.00	–
		2017-18	–	195.00	–	195.00	–	195.00	-	195.00	–	0.00	–
		2018-19	–	350.00	–	350.00	–	350.00	-	350.00	–	0.00	–
		2019-20	–	300.00	–	300.00	–	300.00	-	300.00	–	0.00	–
		2020-21	–	150.00	–	150.00	–	150.00	-	150.00	–	0.00	–
		2021-22*	–	20.00	–	20.00	–	16.00	-	16.00	–	4.00	–
	ಒಟ್ಟು		-	1215.00	-	1215.00	-	1211.00	-	1211.00	-	4.00	-
6	ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ, ಬೆಂಗಳೂರು	2016-17	-	751.00	-	751.00	-	751.00	-	751.00	–	–	–
		2017-18	-	934.93	-	934.93	-	934.93	-	934.93	–	–	–
		2018-19	-	150.00	-	150.00	-	150.00	-	150.00	–	–	–
		2019-20	-	200.00	-	200.00	-	200.00	-	200.00	–	–	–
		2020-21	264.00	160.00	-	424.00	15.63	160.00	-	175.63	248.37	–	–
		2021-22*	-	26.00	–	25.00	-	11.94	-	11.94	–	–	–
	ಒಟ್ಟು		264.00	2220.93	-	2484.93	15.63	2207.67	-	2223.50	248.37	0.00	-
	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳು- ಒಟ್ಟು -II (2+3+4+5+6)		264.00	5540.93	-	5904.93	15.63	4638.45	-	4868.70	248.37	774.80	
	ಒಟ್ಟಾರೆ (I+II)		130183.54	498241.38	-	628394.92	112788.64	465530.61	-	578333.77	17364.90	32653.19	-

*2021-22 ನೇ ಸಾಲಿನ ವಿವರವು ಸೆಪ್ಟೆಂಬರ್ 2021ರ ಅಂತ್ಯದವರೆಗಿನ ಮಾಹಿತಿಯಾಗಿರುತ್ತದೆ, ಪ್ರಗತಿಯಲ್ಲಿರುತ್ತದೆ.

**[illegible]

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)

ಅನುಬಂಧ 2

ಕಳೆದ 5 ವರ್ಷಗಳಲ್ಲಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರ	
ಕ್ರ.ಸಂ	ಯೋಜನೆ
I	**ಕೇಂದ್ರ ನೆರವಿನ ಯೋಜನೆಗಳು**
1	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)
2	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ.
3	ರಾಷ್ಟ್ರೀಯ ಆಹಾರ ಭದ್ರತಾ ಮಿಷನ್
4	ರಾಷ್ಟ್ರೀಯ ತೋಟಗಾರಿಕೆ ಮಿಷನ್
5	ರಾಷ್ಟ್ರೀಯ ಆಯುಷ್ ಮಿಷನ್
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
7	ಪರಂಪಾರಗತ ಕೃಷಿ ವಿಕಾಸ ಯೋಜನೆ
8	ಕೃಷಿ ಯಾಂತ್ರೀಕರಣ ಉಪ ಅಭಿಯಾನ
II	**ರಾಜ್ಯವಲಯ ಯೋಜನೆಗಳು**
1	ನಿರ್ದೇಶನ ಮತ್ತು ಆಡಳಿತ
2	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ
3	ಸಮಗ್ರ ತೋಟಗಾರಿಕಾ ಅಭಿವೃದ್ಧಿ
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ
5	ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ
6	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
7	ತೋಟಗಾರಿಕೆ ಕಟ್ಟಡಗಳು
8	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ
9	ಕೃಷಿ ಭಾಗ್ಯ (ತೋಟಗಾರಿಕೆ)
10	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ
11	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ
12	ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು
13	ಕೀಟನಾಶಕ ಶೇಷ ವಿಶ್ಲೇಷಣೆ ಪ್ರಯೋಗಾಲಯ-ನಬಾಡ,
14	ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವ ವಿದ್ಯಾಲಯ,
15	Infrastructure for UHS Bagalakot. RIDF-XXI.
III	**ಜಿಲ್ಲಾವಲಯ ಯೋಜನೆಗಳು**
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ
2	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ
3	ತೋಟಗಾರಿಕೆ ಕಟ್ಟಡಗಳು
4	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ
5	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ
6	ಪ್ರಚಾರ ಮತ್ತು ಸಾಹಿತ್ಯ
7	ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ
8	ಜೇನು ಸಾಕಾಣಿಕೆ
9	ರೈತರಿಗೆ ಸಹಾಯ
10	ರೈತರಿಗೆ ತರಬೇತಿ

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)